# ಕುಂಭಕರ್ಣನೆಂಬ ಕದನಕಲಿ ರಣರಂಗದಲ್ಲಿ ಹಾಸ್ಯದೋಕುಳಿ

■ ಜಿ. ಕೃಷ್ಣಪ್ಪ

ಕಲೆ: ಭಾವು ಪತ್ತಾರ

ಕುಂಭಕರ್ಣನು ರಣರಂಗಕ್ಕೆ ನುಗ್ಗಿ ಬರುವಾಗ ಅವನ ಮಹತ್ ರುದ್ರ ಪರ್ವತಗಾತ್ರದ ಶರೀರವನ್ನು ಕಪಿಸೇನೆ ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟು ನೋಡಿತು. ಅವನು ತನ್ನ ಮುದ್ಗರವೆಂಬ ಆಯುಧವನ್ನು ಬೀಸಿ ಕ್ಷಣಾರ್ಧದಲ್ಲಿ ಒಂದು ಕೋಟಿ ಕಪಿಸೈನ್ಯವನ್ನು ಅರೆದು ಕೊಂದನು. ಅವನನ್ನು ಎದುರಿಸಲಾಗದೆ ಅದು ಓಡತೊಡಗಿತು. ಆಗ ಆ ಸೇನೆಗೆ ಧೈರ್ಯ ತುಂಬಿದ ಅಂಗದನು ಕುಂಭಕರ್ಣನನ್ನು ಎದುರಿಸಿದನು. ವಾನರಸೇನೆಯು ಅವನ ಮಹಾ ಮೈಯ ಮಂದರ ಪರ್ವತವನ್ನು ಒದೆಯಲು ನುಗ್ಗುವ ಕಡೆದ ಕಡಲಿನ ದೊಡ್ಡ ತೆರೆಗಳಂತೆ ಆರ್ಭಟಿಸುತ್ತ ಮುನ್ನುಗ್ಗಿತು.

ಋಷಭ, ಮೈಂದ, ಆಂಜನೇಯ, ಗಜ ಮುಂತಾದ ವಾನರ ಶೂರರು ನುಗ್ಗಿ ಬರುತ್ತಿರುವುದನ್ನು ಕಂಡು ರಾಕ್ಷಸನ ಪೌರುಷ ಹೆಚ್ಚಿತು. ಮುದ್ಗರದ ಹೊಡೆತಕ್ಕೆ ಅಂಗದನು ರಕ್ತಕಾರಿ ಮೂರ್ಛೆ ಹೋದನು. ಕಪಿಸೇನೆ ಕೆರಳಿ ಕುಂಭಕರ್ಣನ ಮೇಲೆ ಎರಗಿತು. ಹಾಗೆ ನುಗ್ಗಿ ಬಂದ ವಾನರ ವೀರರಾದ ದ್ವಿವಿದ, ಶರಭ, ಗಂಧಾಮಾದನ, ನೀಲ, ಗವಾಕ್ಷ, ಮೊದಲಾದವರನ್ನು ರಾಕ್ಷಸನು ಹೊಡೆದು ಉರುಳಿಸಿದನು. ಬೇಸಿಗೆಯಲ್ಲಿ ಒಣಗಿನಿಂತ ಕಾಡನ್ನು ದಾವಾಗ್ನಿ ಸುಡುವಂತೆ ಅವನು ವಾನರ ಸೈನ್ಯವನ್ನು ನಾಶಪಡಿಸಿದನು.

ಆಂಜನೇಯನು ಬೆಟ್ಟದ ಶಿಖರವನ್ನು ಕಿತ್ತು ಆಕಾಶಗಾಮಿಯಾಗಿ ಹೋಗಿ ಕುಂಭಕರ್ಣನ ತಲೆಗೆ ಕುಕ್ಕಿದನು. ರಕ್ತ ಹೊಮ್ಮಿ ಕ್ಷಣ ಹೊತ್ತು ಮೈಮರೆತ ರಾಕ್ಷಸನು ಕೋಪಾವಿಷ್ಟನಾದನು. ಮುದ್ಗರದಿಂದ ಆಂಜನೇಯನ ಎದೆಗೆ ಹೊಡೆಯಲು ಅವನು ಮೂರ್ಛಿತನಾದನು.

ಅಷ್ಟರಲ್ಲಿ ಅವನನ್ನು ಎದುರಿಸಲು ಬಂದ ಲಕ್ಷ್ಮಣನು ಪರ್ವತದೇಹಿಯ ಶರೀರವನ್ನು ಬಾಣಗಳಿಂದ ಚುಚ್ಚಿದನು. ಆಗ ಅದು ಮುಳ್ಳುಹಂದಿಯ ದೇಹದಂತೆ ಕಂಡಿತು!. ಲಕ್ಷ್ಮಣನ ಬಾಣಕ್ಕೆ ಕುಂಭಕರ್ಣನ ಬಲಗೈ ಕತ್ತರಿಸಿತು. ಆ ಕೈ ಹಿಡಿದಿದ್ದ ಮುದ್ಗರವು ಅಪ್ಪಳಿಸಲು ಲಕ್ಷ್ಮಣನು ಮೂರ್ಛಿತನಾದನು. ರಾಕ್ಷಸನು ಎಡಗೈಯಲ್ಲಿ ತ್ರಿಶೂಲವನ್ನು ಹಿಡಿದು ಸುಗ್ರೀವನ ಅಂಗರಕ್ಷೆಯಲ್ಲಿದ್ದ ರಾಮಚಂದ್ರನ ಕಡೆಗೆ ನುಗ್ಗಿದನು.

ಅದನ್ನು ಕಂಡ

